**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ**

**ಅಸಲು ದಾವಾ ಸಂಖ್ಯೆ.179/2020**

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಗಿರೀಶ್ ನಾಯ್ಕ | ಪಿಡಬ್ಲ್ಯೂಃ **3** |
| **ತಂದೆಯ ಹೆಸರು** | : | ವೆಂಕ್ಯಾನಾಯ್ಕ | |
| **ವಯಸ್ಸು** | : | 38 ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಲಕ್ಕಿನಕೊಪ್ಪ | |

ದಿನಾಂಕಃ **19-06-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ವಾದಿ ಪರ ವಕೀಲರಿಂದ:-

ಕುಮಾರ್ ನಾಯ್ಕರವರು ನಿಪಿ-1 ಕ್ರಯದ ಕರಾರು ಪತ್ರವನ್ನು ಬೋಜ್ಯಾನಾಯ್ಕರವರಿಗೆ ಸರ್ವೆ ನಂ.24 ಕ್ಕೆ ಸಂಬಂಧಪಟ್ಟಂತೆ ಬರೆದುಕೊಟ್ಟಿರುತ್ತಾರೆ. ನಿಪಿ-1 ಕ್ರಯದ ಕರಾರು ಪತ್ರಕ್ಕೆ ನಾನು ಮತ್ತು ಗಂಗಪ್ಪ ಇಬ್ಬರು ಸಾಕ್ಷಿದಾರರಾಗಿ ಸಹಿಯನ್ನು ಮಾಡಿರುತ್ತೇವೆ. ಈಗ ಗಂಗಪ್ಪ ತೀರಿಕೊಂಡಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.